Form No.4 (Civil)
Deposition
Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆಃ 12/2025

ಪ್ರಾ.ಸಾ. 11 ಚಾ.ಸಾ 28

| | | |
|---|---|---|
| ಹೆಸರು | : | ಸುರೇಶ ಸ್ವಾಮಿ |
| ತಂದೆಯ ಹೆಸರು | : | ಚಂದ್ರಶೇಖರ ಸ್ವಾಮಿ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ಕಿರಾಣಿ ಅಂಗಡಿಯ ವ್ಯಾಪಾರ |
| ವಾಸ | : | ಕಾಕಲವಾರ |

## ಪ್ರಮಾಣ ವಚನ ಭೋಧಿಸಿದ ದಿನಾಂಕಃ 02-05-2026
## ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ಚಾಸಾ-18 ನನ್ನ ಶ್ರೀಮತಿ ಸಂತೋಷಮ್ಮ ಇವರು ನನ್ನ ಅಕ್ಕಳಾಗಿರುತ್ತಾಳೆ. ಚಾಸಾ-1, 16, 21, 23 ಮತ್ತು 27 ರವರ ಹಾಗೂ ಮೃತ ನರೇಂದ್ರನ ಪರಿಚಯ ಇರುತ್ತದೆ. ನಾನು ಕಿರಾಣಿ ಅಂಗಡಿ ಇಟ್ಟುಕೊಂಡಿರುತ್ತೇನೆ. ನಾನು ಜಾಸ್ತಿ ನಾನು ಕಿರಾಣಿ ಅಂಗಡಿ ನೋಡಿಕೊಂಡು ಹೋಗುತ್ತೇನೆ ನಾನು ಇಲ್ಲದಿದ್ದಾಗ ಚಾಸಾ-18 ರವರು ಕಿರಾಣಿ ಅಂಗಡಿಯನ್ನು ನೋಡಿಕೊಂಡು ಹೋಗುತ್ತಾರೆ. ನನ್ನ ಕಿರಾಣಿ ಅಂಗಡಿಯ ಸೇಫ್ಟಿಗಾಗಿ ಅಂಗಡಿಯ ಮೇಲ್ಭಾಗದಲ್ಲಿ ನಾನು ಸಿಸಿ ಕ್ಯಾಮರ ಕೂಡಿಸಿರುತ್ತೇನೆ.

2. ದಿಃ 30.09.2024 ರಂದು ನಾನು ಗುರುಮಠಕಲಗೆ ಸಾಯಂಕಾಲ 5.30 ಗಂಟೆಯ ಸುಮಾರು ಹೋಗಿರುತ್ತೇನೆ. ಅದೇ ದಿನ ರಾತ್ರಿ 10.00 ಗಂಟೆಗೆ ಮರಳಿ ಕಾಕಲವಾರಕ್ಕೆ ಬಂದಿರುತ್ತೇನೆ. ನಮ್ಮ ಮನೆಯ ಪಕ್ಕದಲ್ಲಿ ಚಾಸಾ-27 ರವರ ಹಳೆಯ ಮನೆಯ ಎತ್ತಿನ ಕೊಟ್ಟಿಗೆಯಲ್ಲಿ ಜನ ಸೇರಿದ್ದರು. ನರೇಂದ್ರ ಎನ್ನುವ ಬಾಲಕ ಸಾವನ್ನೊಪ್ಪಿರುತ್ತಾನೆ ಎಂದು ಜನರು ಮಾತಾನಾಡಿಕೊಳ್ಳುತ್ತಿದ್ದರು.

ನಂತರ ಸ್ಥಳಕಕ್ಕೆ ಚಾಸಾ-1, 16 ಮತ್ತು ನಾನು ಹಾಗೂ ಇತರರು ಚಾಸಾ-27 ರವರ ಎತ್ತಿನ ಕೊಟ್ಟಿಗೆಯ ಹತ್ತಿರ ಹೋಗಿರುತ್ತೇವೆ. ಮೃತ ಬಾಲಕನ ಶರೀರದ ಹತ್ತಿರ ಚಪ್ಪಲಿಗಳು ಕಂಡು ಬಂದವು.

3. ದಿಃ 02.10.2024 ರಂದು ಚಾಸಾ-45 ರವರು ಬಂದು ಸಿಸಿ ಟಿವಿ ಇಟ್ಟಿಕೊಂಡಿದಿಯಾ ಅಂತಾ ಕೇಳಿರುತ್ತಾರೆ ಅದಕ್ಕೆ ನಾನು ನನ್ನ ಅಂಗಡಿಯ ರಕ್ಷಣೆಗೆ ಇಟ್ಟುಕೊಂಡಿರುತ್ತೇನೆ ಎಂದು ಹೇಳಿರುತ್ತೇನೆ. ಆಗ ಪೊಲೀಸರು ಸಿಸಿ ಟಿವಿ ಪೂಟೇಜ ಚೆಕ ಮಾಡಬೇಕಾಗಿದೆ ಎಂದು ನನಗೆ ಹೇಳಿರುತ್ತಾರೆ. ಅ ಸಿಸಿ ಟಿವಿಯ ನನ್ನ ಮೊಬೈಲನಲ್ಲಿ ಚೇಕ್ ಮಾಡಿರುತ್ತೇನೆ. ದಿಃ 30.9.2024 ರ ಸಂಜೆ 7.00 ಗಂಟೆಯಿಂದ ರಾತ್ರಿ 10.00 ಗಂಟೆಯವರೆಗೆ ದೃಶ್ಯಾವಳಿಗಳನ್ನು ಚೆಕ ಮಾಡಿರುತ್ತೇನೆ. ಅಲ್ಲಿ ಮೃತ ನರೇಂದ್ರ ನನ್ನ ಅಂಗಡಿಗೆ ಬಂದಿದ್ದು ಮತ್ತು ಯಾರು ಯಾರು ಬಂದಿದ್ದರು ಎಂದು ಪರೀಶಿಲಿಸಿದಾಗ ಚಾಸಾ-21, ಮೃತ ನರೇಂದ್ರ, ಆರೋಪಿತನು ಇದ್ದ ಬಗ್ಗೆ ಕಂಡು ಬಂತು. ಈ ದೃಶ್ಯಾವಳಿಗಳನ್ನು ಚಾಸಾ-45 ರವರು ಪೇನಡ್ರೈವನಲ್ಲಿ ಹಾಕಿಕೊಂಡು ಎಂದು ಸೂಚಿಸಿದ ಮೇರೆಗೆ ನಾನು ಅದನ್ನು ಪೆನಡ್ರೈವನಲ್ಲಿ ಹಾಕಿಕೊಂಡಿರುತ್ತೇನೆ. ಆ ಪೆನಡ್ರೈವನ್ನು ನೋಡಿದರೆ ಗುರುತಿಸುತ್ತೇನೆ ಮತ್ತು ದೃಶ್ಯಾವಳಿಗಳನ್ನು ನೋಡಿದರೆ ಗುರುತಿಸುತ್ತೇನೆ.

ಈ ಹಂತದಲ್ಲಿ ಹೆಚ್ಚಿನ ಮುಖ್ಯ ವಿಚಾರಣೆಗಾಗಿ ಮುಂದುಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.